

ನಾವು ದಕ್ಷಿಣ ಆಫ್ರಿಕನ್ನರು ಎಂದು
ಹೆಮ್ಮೆಯಿಂದ ಹೇಳಿಕೊಳ್ಳುವಂತೆ ಮಾಡಿದ
ಕಪ್ಪು ಕವಯಿತ್ರಿ ಇನ್‌ಗ್ರಿಡ್ ಯಾಂಕರ್.
ಆಕೆಯ ಹೋರಾಟದ ಬದುಕು, ಸೂಕ್ಷ್ಮ
ಕಾವ್ಯದ ಕುರಿತ ಮನಕಲಕುವ ಬರಹ ಇಲ್ಲಿದೆ

## ಶ್... ಸುಮ್ಮನಿರು, ಕಪ್ಪು ಗುಮ್ಮ ಬಂದ

(ಸಿಮೋನ್‌ಗೆ)

ದೂರ ದಿಗಂತದ
ಹಸಿರು ಕಾಲುಹಾದಿಯಲ್ಲಿ ಭೂಮಿಯ ಸುತ್ತ
ಮುದುಕನೊಬ್ಬ ನಡೆಯುತ್ತಿದ್ದಾನೆ ಕಾಲೆಳೆಯುತ್ತ,
ಅವನ ತಲೆಗೂದಲಲ್ಲಿ ಅರಳಿದ ಚಂದಿರ
ಎದೆಯೊಳಗೆ ಕೋಗಿಲೆ ಹಾಡು
ಕೋಟುಗುಂಡಿಯಲ್ಲಿ ಕಿತ್ತಿಟ್ಟ ಮಲ್ಲಿಗೆ,
ಕಾಲದ ಭಾರಕ್ಕೆ ಬಾಗಿದೆ ಬೆನ್ನು,
ನಡೆಯುತ್ತಿದ್ದಾನೆ ಅವನು.

ಅಮ್ಮ, ಅವನ ಕೆಲಸವೇನಮ್ಮ?

ಕರೆಯುತ್ತಾನೆ ಅವನು ಮಿಡತೆಗಳನ್ನು,
ನುಗ್ಗುತ್ತುಗ್ಗುತ್ತ ಹಾಡುವ ಕಪ್ಪು ಮೌನವನ್ನು,
ಮುದ್ದು ಮಗು,
ಡವಡವನೆ ಮಿಡಿವ ಚುಕ್ಕೆಗಳನ್ನು
ಕರೆಯುತ್ತಾನೆ ಅವನು ತೆಳ್ಳಗೆ, ಗುಂಡಗೆ
ಜೀರುಂಡೆಗಳ ಹಾಗೆ ತುಡಿವೆದೆಗಳನ್ನು.

ಅಮ್ಮ, ಅವನ ಹೆಸರೇನಮ್ಮ?

ಅವನ ಹೆಸರು ಶ್...
ಅವನ ಹೆಸರು ನಿದಿರೆ
ಕನಸುಗಳ ಊರಿಂದ ಬಂದ ಅವನು

